ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ584133, ರಾಯಚೂರು, ಕರ್ನಾಟಕ, ಭಾರತ

ಆಡಳಿತ ವಿಭಾಗ Email: registrarrur@gmail.com

1

ಸಂಖ್ಯೆ: ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/ ದಿನಾಂಕ: 08.02.2021

## ಸಿಂಡಿಕೇಟ್ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ 09.02.2021ರಂದುಬೆಳಿಗ್ಗೆ 11:30 ಗಂಟೆಗೆ ಸಿಂಡಿಕೇಟ್ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.02.2021.

*****

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಿಂಡಿಕೇಟಿನ ಅಸಮಾನ್ಯ ಸಭೆಯನ್ನು ಮಂಗಳವಾರ ದಿನಾಂಕ: 09.02.2021 ರಂದು ಬೆಳಿಗ್ಗೆ 11:30 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಕರೆಯಲಾಗಿದೆ. ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

## ಸಭೆಯ ಕಾರ್ಯಸೂಚಿ

1. ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಗೆ, ಕುಲಸಚಿವರು (ಮೌಲ್ಯಮಾಪನ) ಇವರ ಕಚೇರಿ ಉಪಯೋಗಕ್ಕಾಗಿ ವಾಹನ (ಕಾರು)ವನ್ನು ಬಾಡಿಗೆ ಪಡೆಯುವ ವಿಷಯವನ್ನು ಪರಿಗಣಿಸುವ ಕುರಿತು.
2. ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಗೃಹ ಕಚೇರಿಗೆ ಪೀಠೋಪಕರಣಗಳನ್ನು ಖರೀದಿಸಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.
3. ರಾಯಚೂರು ವಿಶ್ವವಿದ್ಯಾಲಯದ ನಗರ ಕಚೇರಿ/ಅತಿಥಿ ಗೃಹವನ್ನು ರಾಯಚೂರು ನಗರದಲ್ಲಿ ಸ್ಥಾಪಿಸುವ ವಿಷಯವನ್ನು ಪರಿಗಣಿಸುವ ಕುರಿತು.
4. ರಾಯಚೂರು ವಿಶ್ವವಿದ್ಯಾಲಯಕ್ಕೆ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರನ್ನು ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.
5. ರಾಯಚೂರು ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ವಿಭಾಗಗಳಿಗೆ ಪ್ರಯೋಗಾಲಯವನ್ನು ಸ್ಥಾಪಿಸುವ ವಿಷಯವನ್ನು ಪರಿಗಣಿಸುವ ಕುರಿತು.
6. ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಗೃಹ ಕಚೇರಿಯ ದೈನಂದಿನ ಕೆಲಸಗಳಿಗಾಗಿ ಅತ್ಯವಶ್ಯಕ ಸಿಬ್ಬಂದಿಗಳನ್ನು ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು.

(ಪ್ರೊ.ವಿಶ್ವನಾಥ ಎಂ.)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಗೆ,

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ: 09.02.2021 ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1) ಪ್ರೊ. ಹರೀಶ್‌ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2) ಪ್ರೊ. ವಿಶ್ವನಾಥಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಸ್ವಾಗತಿಸುತ್ತಾ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಗೆ, ಕುಲಸಚಿವರು (ಮೌಲ್ಯಮಾಪನ) ಇವರ ಕಚೇರಿ ಉಪಯೋಗಕ್ಕಾಗಿ ವಾಹನ (ಕಾರು)ಗಳನ್ನು ಬಾಡಿಗೆ ಪಡೆಯುವ ವಿಷಯವನ್ನು ಪರಿಗಣಿಸುವ ಕುರಿತು.<br>Mohan | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಸರ್ಕಾರದ ಆದೇಶವನ್ನು ಗಮನದಲ್ಲಿಟ್ಟುಕೊಂಡು ಹಾಗೂ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗದಂತೆ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರ ಕಚೇರಿ ಉಪಯೋಗಕ್ಕಾಗಿ ಪ್ರತಿ ವಾಹನಕ್ಕೆ ಮಾಸಿಕ ಗರಿಷ್ಠ 30,000=00ಗಳ (ವಾಹನಕ್ಕೆ ತಗಲುವ ಇಂಧನ ಮತ್ತು ವಾಹನ ಚಾಲಕನ ದಿನಭತ್ಯೆ ಹೊರತು ಪಡಿಸಿ) ಮಾರುಕಟ್ಟೆ ದರಗಳಿಗನುಸಾರ ಅತೀ ಕಡಿಮೆ ದರವಾಗಿದ್ದು ಹಾಗೂ ಸದರಿದರಕ್ಕೆ ಆಸಕ್ತ ಟ್ರಾವೆಲ್ ಏಜನ್ಸಿಯವರು ದೊರಕುವುದು ಕಷ್ಟವಾಗಿರುತ್ತದೆ. ಆದರೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಆದೇಶ ಸಂ: ಕ್ರ.ಸಂ.ಗುವಿಕ/ಕವಿವಿ/ ಎಇಇ–ಆರ್/Swift Dzire/2020–21/280 ದಿನಾಂಕ: 09.09.2020ರ ಪ್ರಕಾರ ರಾಯಚೂರು ವಿಶ್ವವಿದ್ಯಾಲಯದ ಪೂರ್ವ ವಿಶೇಷಾಧಿಕಾರಿಗಳಿಗೆ ಕಾರನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಮಾಸಿಕ ರೂ. 32,000.00 (ವಾಹನಕ್ಕೆ ತಗಲುವಇಂಧನ ಮತ್ತು ವಾಹನ ಚಾಲಕನ ಭತ್ಯೆ ಹೊರತುಪಡಿಸಿ) ಪಡೆದುಕೊಳ್ಳಲು ಮಂಜೂರಾತಿ ನೀಡಲಾಗಿದೆ. ಅದರಂತೆ ಆರ್ಥಿಕ ಮಿತಿಯೊಳಗೊಳಪಟ್ಟು ವಿಶ್ವವಿದ್ಯಾಲಯದ ನಿಯಮಾನುಸಾರ ರೂ. 32,000/– (ವಾಹನಕ್ಕೆ ತಗಲುವಇಂಧನ ಮತ್ತು ವಾಹನ ಚಾಲಕನ ಭತ್ಯೆ ಹೊರತುಪಡಿಸಿ) ಎರಡು ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವಂತೆ ಸಿಂಡಿಕೇಟ್ ಅನುಮೋದಿಸಿತು. |
| 2. | ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಗೃಹ ಕಚೇರಿಗೆ ಪೀಠೋಪಕರಣಗಳನ್ನು ಖರೀದಿಸಿಕೊಳ್ಳುವ ವಿಷಯವನ್ನು ಪರಿಗಣಿಸುವ ಕುರಿತು.<br>Pujari + Naveed | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಯರಗೇರಾ ಗ್ರಾಮದಲ್ಲಿರುವ ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಆಗಸ್ಟ್–2020ರಲ್ಲಿ ರಾಯಚೂರು ವಿಶ್ವವಿದ್ಯಾಲಯವೆಂದು ಸರ್ಕಾರ ಆದೇಶಿಸಲಾಯಿತು. ರಾಯಚೂರು ವಿಶ್ವವಿದ್ಯಾಲಯದ ಮೊದಲನೇ ಹಾಗೂ ನೂತನವಾಗಿ ಅಧಿಕಾರ ಸ್ವೀಕರಿಸಿದ ಕುಲಪತಿಗಳ ಗೃಹ ಕಚೇರಿಗೆ ಅವಶ್ಯವಿರುವ ಪೀಠೋಪಕರಣಗಳನ್ನು ಖರೀದಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| 3. | ರಾಯಚೂರು ವಿಶ್ವವಿದ್ಯಾಲಯದ ನಗರ ಕಚೇರಿ/ ಅತಿಥಿ ಗೃಹವನ್ನು ರಾಯಚೂರು ನಗರದಲ್ಲಿ ಸ್ಥಾಪಿಸುವ ವಿಷಯವನ್ನು ಪರಿಗಣಿಸುವ ಕುರಿತು.<br>Nagaraj | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ರಾಯಚೂರು ವಿಶ್ವವಿದ್ಯಾಲಯವು ನೂತನವಾಗಿ ಸ್ಥಾಪಿತಗೊಂಡು ಬಂದಿದ್ದು, ತನ್ನದೇ ಆದ ಒಂದು ಅತಿಥಿ ಗೃಹವನ್ನು ನಿರ್ಮಿಸುವವರೆಗೆ ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಸಭೆಗಳನ್ನು ನಡೆಸಲು ಸಭಾಂಗಣವಾಗಿ ಮಾಡಲು ಅನುಕೂಲವಾಗುವಂತೆ ಸೂಕ್ತ ಬಾಡಿಗೆ ಮನೆಯನ್ನು ರಾಯಚೂರು ನಗರದಲ್ಲಿ ತೆಗೆದುಕೊಂಡು ರಾಯಚೂರು ವಿಶ್ವವಿದ್ಯಾಲಯದ ನಗರಕಚೇರಿ/ಅತಿಥಿ ಗೃಹವನ್ನಾಗಿ ಮಾಡಲು ಹಾಗೂ |

| | | |
|---|---|---|
| | | ಸದರಿ ಅತಿಥಿ ಗೃಹಕ್ಕೆ ಬೇಕಾಗುವ ಅವಶ್ಯಕ ಪೀಠೋಪಕರಣಗಳನ್ನು ಖರೀದಿಸಲು ಸಿಂಡಿಕೇಟ್ ಅನುಮೋದಿಸಿತು. |
| 4. | ರಾಯಚೂರು ವಿಶ್ವವಿದ್ಯಾಲಯಕ್ಕೆ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರನ್ನು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುವ ವಿಷಯವನ್ನು ಪರಿಗಣಿಸುವ ಕುರಿತು.<br>Mohan | ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ, ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ರಾಯಚೂರು ವಿಶ್ವವಿದ್ಯಾಲಯಕ್ಕೆ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಹುದ್ದೆಗೆ ಡಾ. ರಾಘವೇಂದ್ರ ಹೆಚ್. ಫತೇಪುರ್, ನಿವೃತ್ತ ಪ್ರಾಂಶುಪಾಲರು, ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ, ಬಾಗಲಕೋಟೆ ಹಾಗೂ ವಿಶ್ರಾಂತ ನಿರ್ದೇಶಕರು, ಕಾಲೇಜುಅಭಿವೃದ್ಧಿ ಮಂಡಳಿ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಅರ್ಜಿಯನ್ನು ಸಲ್ಲಿಸಿದ್ದರು. ಮಾನ್ಯ ಕುಲಪತಿಯವರ ಅಧಿಕಾರದಡಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರು, ಮಾನ್ಯ ಕುಲಪತಿಗಳಿಗೆ ನೀಡಿರುವ ಆದೇಶದನ್ವಯ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 56(1) ಕಲಂ ಪ್ರಕಾರ ತಾತ್ಕಾಲಿಕವಾಗಿ ನಿರ್ದೇಶಕರು, ಸಿ.ಡಿ.ಸಿ. ಹುದ್ದೆಗೆ ದಿನಾಂಕ: 01.03.2021 ರಿಂದ ಪೂರ್ವಾನ್ವಯವಾಗುವಂತೆ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಮತ್ತು ಪ್ರತಿ ತಿಂಗಳಿಗೆ ರೂ. 25,000/- ಗೌರವ ಸಂಭಾವನೆಯನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| 5. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ಮತ್ತುರಸಾಯನ ಶಾಸ್ತ್ರ ವಿಭಾಗಗಳಿಗೆ ಪ್ರಯೋಗಾಲಯವನ್ನು ಸ್ಥಾಪಿಸುವ ವಿಷಯವನ್ನು ಪರಿಗಣಿಸುವಕುರಿತು.<br>Lakshmikanth | ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ, ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಗುಲಬರ್ಗಾ ವಿಶ್ವವಿದ್ಯಾಲಯವು 2017-18 ನೇ ಸಾಲಿನಲ್ಲಿ ಭೌತಶಾಸ್ತ್ರ ಮತ್ತುರಸಾಯನ ಶಾಸ್ತ್ರ ವಿಭಾಗಗಳನ್ನು ಪಿ.ಜಿ.ಸೆಂಟರ್‌ನಲ್ಲಿ ಪ್ರಾರಂಭಿಸಿದ್ದು, ಈ ಕೋರ್ಸಗಳಿಗೆ ಮೂಲಭೂತ ಸೌಕರ್ಯಗಳಾದಂತಹ ಪ್ರಯೋಗಾಲಯ ಮತ್ತು ಪೀಠೋಪಕರಣಗಳು ಇಲ್ಲದೆ ನಡೆಯುತ್ತಿವೆ. ಇದು ಈ ವಿಭಾಗಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ಪ್ರಾಯೋಗಿಕ ಜ್ಞಾನವನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ. ಇದರಿಂದ ಅವರ ಶೈಕ್ಷಣಿಕ ಬೆಳವಣಿಗೆ ಕುಂಟಿತಗೊಳ್ಳುತ್ತಿದೆ. ಆದಕಾರಣ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ವಿಭಾಗಗಳಿಗೆ ಪ್ರಯೋಗಾಲಯಗಳನ್ನು ಸ್ಥಾಪಿಸಲು ಸಿಂಡಿಕೇಟ್ ಅನುಮೋದಿಸಿತು. |
| 6. | ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಗೃಹ ಕಛೇರಿಯ ದೈನಂದಿನ ಕೆಲಸಗಳಿಗಾಗಿ ಅತ್ಯವಶ್ಯಕ 03 ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುವ ವಿಷಯವನ್ನು ಪರಿಗಣಿಸುವ ಕುರಿತು.<br>Nagaraj | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಲಾವಾರು ಉದ್ಯೋಗಕಾಂಕ್ಷಿಗಳು ತಮ್ಮ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅತ್ಯವಶ್ಯಕವಾಗಿ 03 ಸಿಬ್ಬಂದಿಯವರನ್ನು ಮಾನ್ಯ ಕುಲಪತಿಗಳ ಗೃಹ ಕಚೇರಿಯ ಕೆಲಸಗಳಿಗಾಗಿ ಮಾನ್ಯ ಕುಲಪತಿಯವರ ಅಧಿಕಾರದಡಿ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರು, ಮಾನ್ಯ ಕುಲಪತಿಗಳಿಗೆ ನೀಡಿರುವ ಆದೇಶದನ್ವಯ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 56(1) ಕಲಂ ಪ್ರಕಾರ ತಾತ್ಕಾಲಿಕವಾಗಿ ಗ್ರೂಪ್ "ಡಿ" ಕಾರ್ಯಗಳಿಗೆ 03 ಸಿಬ್ಬಂದಿಯವರನ್ನು ದಿನಾಂಕ: 01.12.2020 ರಿಂದ ಪೂರ್ವಾನ್ವಯವಾಗುವಂತೆ 11ತಿಂಗಳು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಮತ್ತು ಪ್ರತಿ ತಿಂಗಳಿಗೆ ರೂ. 12,000/- ಮಾಸಿಕ ಸಂಚಿತ ವೇತನ ನಿಗದಿಪಡಿಸಿ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |

ಕುಲಸಚಿವರು/ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಕುಲಪತಿಗಳು/ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

9/2/2021.